# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 276 | Pages. 2 | Date: 21-09-2025, SUNDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 276 – ಪುಟಗಳು : 2 21-09-2025 ಭಾನುವಾರ | Ph: 8762954248 | ದರ : ₹1


# ಶೀಘ್ರ ಅರ್ಜಿ ವಿಲೇವಾರಿ ಅಧಿಕಾರಿಗಳ ಆದ್ಯತೆಯಾಗಲಿ

## ಜನ ಸ್ಪಂದನ ಸಭೆಯಲ್ಲಿ ಡಿಸಿ ಸೂಚನೆ | 134 ಅರ್ಜಿ ಸ್ವೀಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ಅರ್ಜಿಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸುವಹಿಸುವುದರ ಜೊತೆಗೆ ಬಡಜನರ ಸಮಸ್ಯೆ ಬಗೆಹರಿಸಲು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನ ಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿ, ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಜಮೀನುಗಳ ಖಾತೆಗೆ ಸಂಬಂಧಿಸಿ ಅಹವಾಲು ಬರುತ್ತಿದ್ದು, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸುವಂತೆ ತಿಳಿಸಿದರು.

ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ




ಅನುಮತಿ ನೀಡುವ ಸಂದರ್ಭದಲ್ಲಿ ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ವಾಹನ ನಿಲುಗಡೆಗೆ ಸ್ಥಳಾವಕಾಶ ಇದೆಯೇ ಎಂಬುದನ್ನು ಪರಿಶೀಲಿಸಿ ನಂತರ ಅನುಮತಿ ನೀಡಬೇಕು ಎಂದು ಹೇಳಿದರು.

ಜಾತಿ ಪ್ರಮಾಣ ಪತ್ರ ಕುರಿತು ಬಂದಂತಹ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ, 2007ರಲ್ಲಿ ಶಿಳ್ಳೆಕ್ಯಾತ ಎಂದು ಜಾತಿ ಪ್ರಮಾಣ ಪತ್ರ ಇದೆ. ಈಗ ಬುಡಬುಡಿಕೆ ಎಂದು ಬರುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅನ್ಯಾಯ ಆಗಬಾರದು. ಪರಿಶೀಲನೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ತಾಲ್ಲೂಕಿನಲ್ಲಿ ತಿಂಗಳ ಮೊದಲ ಶನಿವಾರ ಸಾರ್ವಜನಿಕರ ಕುಂದು ಕೊರತೆ ಅಹವಾಲು ಸ್ವೀಕಾರ ಮಾಡುವುದರ ಜೊತೆಗೆ ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸುವಂತೆ ತಹಶೀಲ್ದಾರ್‌ಗಳಿಗೆ ನಿರ್ದೇಶನ ನೀಡಿದರು.

ಸಾರ್ವಜನಿಕರ ಮಾಹಿತಿಗಾಗಿ ಹಿಮ್ಸ್‌ನಲ್ಲಿ ದರ ಪಟ್ಟಿಯನ್ನು ಫಲಕದಲ್ಲಿ ಅಳವಡಿಸುವಂತೆ ಸೂಚನೆ ನೀಡಿದರಲ್ಲದೆ, ಹಿಮ್ಸ್ ಮುಂಭಾಗದಲ್ಲಿ ಆಹಾರ ಮಾರಾಟ ಮಾಡುವ ಅಂಗಡಿಗಳಲ್ಲಿ ಸ್ವಚ್ಛತೆ ಕಾಪಾಡುತ್ತಿಲ್ಲ. ಗುಣಮಟ್ಟದ

> ಜಿಲ್ಲೆಯಲ್ಲಿ ರಸ್ತೆ ನಿಯಮ ಸರಿಯಾಗಿ ಪಾಲನೆಯಾಗದೆ ಅಪಘಾತಗಳು ಹೆಚ್ಚುತ್ತಿವೆ. ಸಂಚಾರ ಪೊಲೀಸರು ಕಟ್ಟುನಿಟ್ಟಾಗಿ ವಾಹನಗಳ ತಪಾಸಣೆ ಮಾಡಬೇಕು. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸದೆ ಇರುವುದು ಕಂಡುಬಂದರೆ ಮುಲಾಜಿಲ್ಲದೆ ದಂಡ ವಿಧಿಸಬೇಕು.
>
> – ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ

ಆಹಾರ ನೀಡುತ್ತಿಲ್ಲ. ಜೊತೆಗೆ ಅಂಬುಲೆನ್ಸ್‌ಗಳ ಸಂಚಾರಕ್ಕೆ ಅಡೆತಡೆ ಆಗುತ್ತಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮವಹಿಸುವಂತೆ ಸೂಚಿಸಿದರು.

ಸರ್ಕಾರದ ಮಾರ್ಗಸೂಚಿ ಅನ್ವಯ ಇಲಾಖೆ ಗುತ್ತಿಗೆ ಆಧಾರದಲ್ಲಿ, ಹೊರಗುತ್ತಿಗೆಯಲ್ಲಿ ಹುದ್ದೆಗಳ ಭರ್ತಿ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಶೇ.02ರಷ್ಟು ವಿಶೇಷ ಚೇತನರನ್ನು ಪರಿಗಣಿಸುವಂತೆ ಹೇಳಿದರು.

ಅರಣ್ಯ ಇಲಾಖೆಯಿಂದ ರೈಲ್ವೆ ಬ್ಯಾರಿಕೇಡ್ ಸರಿಯಾಗಿ ಅಳವಡಿಸಿಲ್ಲ ಎಂಬ ದೂರಿನ ಕುರಿತಂತೆ, ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸುವಂತೆ ಉಪ ವಿಭಾಗಾಧಿಕಾರಿಗೆ ಸೂಚಿಸಿದರು.

ಎಲ್ಲಾ ತಹಸೀಲ್ದಾರ್‌ಗಳು ರಸ್ತೆ ಸುರಕ್ಷತಾ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಫುಟ್ ಪಾತ್ ಕ್ಲಿಯರೆನ್ಸ್ ಡ್ರೈವ್‌ಮಾಡಲು ಸೂಚಿಸಿದರು.

ಟ್ರಕ್‌ಟರ್ಮಿನಲ್ ನಿರ್ಮಾಣಕ್ಕೆ ನಗರದ ಹೊರವಲಯದಲ್ಲಿ ಜಾಗವನ್ನು ಗುರುತಿಸುವಂತೆ ಸೂಚಿಸಿದರಲ್ಲದೆ, ಶಾಲಾ ವಾಹನ ಚಾಲಕರು ಸಮವಸ್ತ್ರವನ್ನು ಕಡ್ಡಾಯವಾಗಿಧರಿಸಬೇಕು. ವಾಹನ ಪರವಾನಗಿ ಹೊಂದಿರಬೇಕು. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆಕ್ರಮವಹಿಸಲು ಸೂಚಿಸಿದರಲ್ಲದೆ, ವಾಹನಗಳನ್ನು ಶಿಸ್ತುಬದ್ಧವಾಗಿ ನಿಲುಗಡೆ ಮಾಡಲು ತಿಳಿಸಿದರು.

ರಸ್ತೆ ಬದಿಗಳಲ್ಲಿ ಎಲ್ಲೆಂದರಲ್ಲಿ ಕಸ ಹಾಕುತ್ತಿದ್ದಾರೆ. ಇದನ್ನುತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಸ್ತೆ, ದುರಸ್ತಿ, ಭೂ ಪರಿಹಾರ, ವಿದ್ಯುತ್ ಸಂಪರ್ಕ, ಖಾತೆ ,ಆಶ್ರಯ ಮನೆ, ಹಕ್ಕು ಪತ್ರ, ಪಹಣಿ ತಿದ್ದುಪಡಿ, ಸ್ಮಶಾನ ಹಾಗೂ ಮತ್ತಿತರ ವಿಷಯಗಳ ಕುರಿತುಒಟ್ಟು 134 ಅರ್ಜಿ ಸ್ವೀಕರಿಸಲಾಯಿತು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಸಕಲೇಶಪುರ ಉಪ ವಿಭಾಗಾಧಿಕಾರಿ ರಾಜೇಶ್ ಇತರರಿದ್ದರು.

# ತರಕಾರಿ ವ್ಯಾಪಾರಿಗೆ ಸಮುದಾಯ ಸೇವೆ ಶಿಕ್ಷೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ರಸ್ತೆಗೆ ಅಡ್ಡಲಾಗಿ ತರಕಾರಿ ಅಂಗಡಿ ಹಾಕಿಕೊಂಡು ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯುಂಟು ಮಾಡಿದ್ದ ಪ್ರಕರಣವೊಂದರಲ್ಲಿ ಆರೋಪಿಗೆ ಸಮುದಾಯ ಸೇವೆ ಮಾಡುವಂತೆ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಬಾಳೆಗದ್ದೆಯ ಹಯಾತ್ ಖಾನ್ ಎಂಬುವವರು ಶಿಕ್ಷೆಗೆ ಗುರಿಯಾದವರು. ಸೆ. 18 ರಂದು ಪಟ್ಟಣದ ಹಳೆಯ ಬಸ್ ನಿಲ್ದಾಣ ಸಮೀಪ ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ಅಡ್ಡಾದಿಡ್ಡಿ ಅಂಗಡಿ ಹಾಕಿಕೊಂಡು ತರಕಾರಿ ಮತ್ತು ಸೊಪ್ಪು ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದರು.

ಸೆ. 19 ರಂದು ಹಯಾತ್ ಖಾನ್‌ಗೆ ದಂಡದ ರೂಪವಾಗಿ 4 ದಿನಗಳ ಕಾಲ ಪ್ರತಿದಿನ 2 ಗಂಟೆ ನಗರ ಪೊಲೀಸ್ ಠಾಣೆಯಲ್ಲಿ ಕಸ ಗುಡಿಸುವುದು ಮತ್ತು ಸ್ವಚ್ಛತಾ ಕೆಲಸ ಮಾಡಬೇಕೆಂದು ಆದೇಶಿಸಿದೆ. ಸೇವೆ ಸಮರ್ಪಕವಾಗಿಲ್ಲವೆಂದು ಕಂಡುಬಂದರೆ ಮತ್ತೆ ನಾಲ್ಕು ದಿನಗಳವರೆಗೆ ವಿಸ್ತರಿಸಲಾಗುವುದೆಂದು ಆದೇಶದಲ್ಲಿ ತಿಳಿಸಲಾಗಿದೆ. ಆದೇಶದ ಪ್ರತಿಯನ್ನು ಪೊಲೀಸ್ ಠಾಣಾಧಿಕಾರಿಗೆ ಕಳುಹಿಸಲಾಗಿದ್ದು, ಸೇವೆಯ ಪಾಲನೆ ಮತ್ತು ಮೇಲ್ವಿಚಾರಣೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

# ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಸೆ.23ಕ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಸಭಾಂಗಣದಲ್ಲಿ ಸೆ.23 ರಂದು ಹತ್ತನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಶೈಲಜಾ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2016 ರಿಂದ ಭಾರತ ಸರ್ಕಾರದ ಆಯುಷ್ ಸಚಿವಾಲಯ ಕಾರ್ತಿಕ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯನ್ನು ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಎಂದು ಆಚರಿಸಲು ನಿರ್ಧರಿಸಿತು. ಪ್ರಧಾನಿ ನರೇಂದ್ರ ಮೋದಿ ಅವರೂ ಪ್ರತಿವರ್ಷ ಸೆ. 23ರಂದು ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಎಂದು ಆಚರಿಸಬೇಕೆಂದು ಘೋಷಿಸಿದ್ದಾರೆ ಎಂದರು.

ಜನರಿಗಾಗಿ ಮತ್ತು ಭೂಗ್ರಹಕ್ಕಾಗಿ ಆಯುರ್ವೇದ ಈ ಘೋಷವಾಕ್ಯದ



ಮೂಲಕ ಆಯುರ್ವೇದವನ್ನು ಜನ ಜೀವನದಲ್ಲಿ ಅಳವಡಿಸಿಕೊಂಡರೆ ವೈಯಕ್ತಿಕ ಆರೋಗ್ಯ ಸುಧಾರಣೆ

ಮಾತ್ರವಲ್ಲದೆ ಪರಿಸರ ಮಾಲಿನ್ಯ, ಜಾಗತಿಕ ತಾಪಮಾನ ವೃದ್ಧಿ ಮುಂತಾದ ವಿಶ್ವಮಟ್ಟದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂಬ ಸಂದೇಶ ಸಾರಲಾಗುತ್ತಿದೆ ಎಂದು ವಿವರಿಸಿದರು.

ಈ ಬಾರಿ ಹತ್ತನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ, ವಿಭಿನ್ನ ಚಟುವಟಿಕೆಗಳ ಮೂಲಕ ಆಚರಿಸಲಾಗುತ್ತಿದೆ. ಸೆ.12 ರಿಂದಲೇ ಪ್ರಾರಂಭವಾಗಿರುವ 20ಕ್ಕೂ ಹೆಚ್ಚು ಚಟುವಟಿಕೆ ತಿಂಗಳ ಕೊನೆವರೆಗೂ ನಡೆಯುತ್ತಿವೆ. ಯೋಗ ತರಬೇತಿ ಶಿಬಿರ, ವಿದ್ಯಾರ್ಥಿಗಳಿಗಾಗಿ ಆರೋಗ್ಯಕರ ಜೀವನಶೈಲಿ ಕುರಿತು ಪ್ರಾಯೋಗಿಕ ತರಬೇತಿ, ಆಯುರ್ವೇದ ಆಹಾರ ತಯಾರಿಕೆ, ಸಾಂಪ್ರದಾಯಿಕ ಹಾಗೂ ಪೌಷ್ಟಿಕ ಆಹಾರಗಳ ಪರಿಚಯ, ಪ್ರಾತ್ಯಕ್ಷಿಕೆ, ವಿವಿಧ ಚಿಕಿತ್ಸಾ ಕ್ರಮಗಳ ನೇರ ಪ್ರದರ್ಶನ, ವಿಶೇಷ ಉಪನ್ಯಾಸ, ಆಯುರ್ವೇದ ತಜ್ಞರಿಂದ ಉಪಯುಕ್ತ ವಿಷಯಗಳ ಬಗ್ಗೆ ಉಪನ್ಯಾಸ, ಭಿತ್ತಿಪತ್ರ ಸ್ಪರ್ಧೆ, ವಿದ್ಯಾರ್ಥಿಗಳ ಸೃಜನಶೀಲತೆ ಉತ್ತೇಜಿಸುವ ಸಾಂಸ್ಕೃತಿಕ ಚಟುವಟಿಕೆ, ವಸ್ತು ಪ್ರದರ್ಶನ ಸೆ.13 ರಿಂದ 23 ರವರೆಗೆ ಆಯುರ್ವೇದದ ಉಪಯುಕ್ತ ಅಂಶಗಳನ್ನು ಜನಸಾಮಾನ್ಯರಿಗೆ ತಲುಪಿಸಲು ವಿಶಾಲ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಎಸ್.ಡಿ.ಎಂ.ಆಯುರ್ವೇದ ಆಸ್ಪತ್ರೆ ಕಟ್ಟಡ ಮುಂಭಾಗ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಸೆ.13–23ರ ವರೆಗೂ ಲಭ್ಯವಿದೆ. ಇದಲ್ಲದೆ ಸಂಸ್ಥೆಯ ಯುವ ಸಂಶೋಧಕರು ಹಾಗೂ

ಅನುಭವಿ ವೈದ್ಯರಿಂದ ಒಟ್ಟು 50 ಆರೋಗ್ಯ ಲೇಖನ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರತಿದಿನ ಪ್ರಕಟವಾಗುತ್ತಿವೆ. ನಗರದ ಸುತ್ತಮುತ್ತಲಿನ ಶಂಕರನಹಳ್ಳಿ, ಕೋರವಂಗಲ, ದೇವೇಗೌಡನಗರ ಗ್ರಾಮಗಳಲ್ಲಿ ಸಂಸ್ಥೆಯ ವೈದ್ಯರು ತೆರಳಿ ಆರೋಗ್ಯ ಸಭೆ ನಡೆಸುತ್ತಿದ್ದಾರೆ. ಗ್ರಾಮಸ್ಥರಿಗೆ ಆಯುರ್ವೇದದ ಸರಳ ಆರೋಗ್ಯ ಸೂತ್ರಗಳ ಪರಿಚಯ, ಶಾಲಾ ಮಕ್ಕಳೊಂದಿಗೆ ಆರೋಗ್ಯ ಸಂವಾದ ಗ್ರಾಮಮಟ್ಟದ ಜಾಗೃತಿ ಕಾರ್ಯಕ್ರಮಗಳು ಜನಸಾಮಾನ್ಯರಿಂದ ಉತ್ತಮ ಸ್ವೀಕಾರ ಪಡೆದಿವೆ ಎಂದು ತಿಳಿಸಿದರು. ಉಚಿತ ಆರೋಗ್ಯ ತಪಾಸಣೆ ಮತ್ತು ಶಿಬಿರ ಸೆ.28 ರಂದು ಬೆಳಿಗ್ಗೆ 10 ರಿಂದ ಸಂಜೆ 4ರ ವರೆಗೂ ನಮ್ಮ ಆಸ್ಪತ್ರೆಯಲ್ಲಿ ನಡೆಯಲಿದೆ. ಇದಲ್ಲದೆ ಸೆ.30 ರವರೆಗೆ ಆಸ್ಪತ್ರೆಯ ವಾರ್ಡ್ ದರದಲ್ಲಿ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ ಎಂದು ಹೇಳಿದರು.

# ಮಠಕ್ಕಿಂತ ಶಾಲೆ ಮುಖ್ಯವೆಂದ ರಾಜೇಂದ್ರ ಸ್ವಾಮೀಜಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಠ ಕಟ್ಟುವ ಮೊದಲು ಶಾಲೆ ಕಟ್ಟಿ ಜ್ಞಾನದ ಹಸಿವು ನೀಗಿಸಿದವರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಎಂದು ಶಿವಗಂಗೆಯ ಶ್ರೀ ಮೇಲಣಗವಿ ವೀರಸಿಂಹಾಸನ ಮಠದ ಡಾ. ಶ್ರೀ ಮಲಯ ಶಾಂತಮುನಿ ಸ್ವಾಮೀಜಿ ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಲೆನಾಡು ವೀರಶೈವ ಸಮಾಜ ಹಾಗೂ ಅಂಗಸಂಸ್ಥೆಗಳ ನೇತೃತ್ವದಲ್ಲಿ ನಡೆದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶತಮಾನದ ಹಿಂದೆಯೇ ಶಿಕ್ಷಣದ ಅನಿವಾರ್ಯತೆ ಅರಿತಿದ್ದ ಶ್ರೀಗಳು ಜಾತಿ, ಮತ, ಪಂಥ ತಾರತಮ್ಯವಿಲ್ಲದೆ ವಿದ್ಯೆ ನೀಡುವ ಮೂಲಕ ಕೋಟ್ಯಾಂತರ ಜನರ ಬಾಳಿಗೆ ಬೆಳಕಾದರು. ಅನಕ್ಷರತೆಯನ್ನು ಮೆಟ್ಟಿನಿಲ್ಲುವ ನಿಟ್ಟಿನಲ್ಲಿ ತಮ್ಮ ಬದುಕು




ಸವೆಸಿದ ಶ್ರೀಗಳು ಅನವಶ್ಯಕವಾಗಿ ಎಂದು ಮಾತನಾಡಿದವರಲ್ಲ. ಮಾತನಾಡುವ ಅನಿವಾರ್ಯತೆ ಸೃಷ್ಟಿಯಾದರೆ ಮಾತ್ರ ಮಾತನಾಡಬೇಕು. ಅದರಿಂದ ಗೌರವ ಹೆಚ್ಚಲಿದೆ. ಮೌನಕ್ಕೆ ಇರುವ ಬೆಲೆ ಮತ್ತೊಂದಕ್ಕೆ ಇಲ್ಲ. ಮಾಡುವ ಕೆಲಸದ ಬಗ್ಗೆ ಏಕಾಗ್ರತೆ ಹೊಂದಿದ್ದವರು ಮಾತ್ರ ಹೆಚ್ಚಿನ ಸಾಧನೆ ಮಾಡಲು ಸಾಧ್ಯ. ಮನಸ್ಸು ನಿಗ್ರಹಿಸುವ ಶಕ್ತಿ ಬೆಳೆಸಿಕೊಳ್ಳುವುದು ಅಗತ್ಯವೆ ಎಂದರು.

ನಮಗೆ ಗೌರವ ದಕ್ಕುವುದು ನಾವು ಮಾಡುವ ಸಾಧನೆಯಿಂದ ಹೊರತು ಹಾಕುವ ಬಟ್ಟೆಯಿಂದಲ್ಲ. ಅನ್ಯರಿಗೆ ಸಹಾಯ ಮಾಡುವುದರಿಂದ ಮಾತ್ರ ಶತಮಾನಗಳ ಕಾಲ ತಮ್ಮ ಹೆಸರು ಚಿರಸ್ಥಾಯಿಯಾಗಲಿದೆ. ಮೂರು ವರ್ಷದ ವಿದ್ಯೆ ನೂರು ವರ್ಷದ ವರೆಗೆ ಬಾಳಿಕೆ ಬರಲಿದೆ. ಆದ್ದರಿಂದ ಶಿಕ್ಷಣದ ಸಮಯದಲ್ಲಿ ಏಕಾಗ್ರತೆಯಿಂದ ವಿದ್ಯೆ ಕಲಿಯಬೇಕು. ವಿದ್ಯಾವಂತರನ್ನು ಹಣ ಹುಡುಕಿಕೊಂಡು ಬರಲಿದೆ. ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವುದು ವಿದ್ಯೆ ಮಾತ್ರ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಮಾತು ಸಾಧನೆಯಾಗಬಾರದು-ಸಾಧನೆ ಮಾತಾಗಬೇಕು. ಈ ವಿಚಾರದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅನುಕರಣೀಯ. ವಿದ್ಯಾಭ್ಯಾಸದ ಪರಿಕಲ್ಪನೆ ಇಲ್ಲದ ವೇಳೆ ಅಕ್ಷರ ಕಲಿಸುವ ದೀಕ್ಷೆ ತೊಟ್ಟ ಶ್ರೀಗಳು ಪ್ರಪಂಚ ಇರುವವರೆಗೂ ಆದರ್ಶವಾಗಿರುತ್ತಾರೆ. ವೀರಶೈವ ಮಠಗಳು ಒಂದು ಸರ್ಕಾರ ಮಾಡಲಾಗದ ಕೆಲಸಗಳನ್ನು ಮಾಡುತ್ತಿವೆ. ವಿದ್ಯೆ ಎಲ್ಲಾ ಪದವಿಗಿಂತ ಮಿಗಿಲು. ವಿದ್ಯೆ ಒಂದಿದ್ದರೆ ಬಡತನ ಬರಲಾರದು ಎಂದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು. ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಸಭಾಭವನದ ವರೆಗೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಅಧ್ಯಕ್ಷತೆಯನ್ನು ಮಲೆನಾಡು ವೀರಶೈವ ಸಮಾಜ ಅಧ್ಯಕ್ಷ ಮೂಗಲಿ ಧರ್ಮಣ್ಣ ವಹಿಸಿದ್ದರು.

ವೀರಶೈವ ಸಮಾಜದ ಮುಖಂಡರಾದ ಬಿ.ಡಿ. ಬಸವಣ್ಣ, ನಾರ್ವೆ ಶಿವಪ್ರಸಾದ್, ವಿದ್ಯಾಶಂಕರ್, ಯುವ ಘಟಕದ ಅಧ್ಯಕ್ಷ ಶಶಿಕುಮಾರ್, ಲೋಹಿತ್ ಕೌಡಳ್ಳಿ, ಜೆಎಸ್‌ಎಸ್ ಶಾಲೆಯ ಪ್ರಾಂಶುಪಾಲ ನಂಜುಡಪ್ಪ, ಸಂಯೋಜಕ ಆರ್. ಮಂಜುನಾಥ್ ಮುಂತಾದವರಿದ್ದರು.

# ಪೆಂಡಾಲ್ ಗಣಪತಿ ಅದ್ದೂರಿ ವಿಸರ್ಜನಾ ಮೆರವಣಿಗೆ

## ಗಮನ ಸೆಳೆದ ಕಲಾ ತಂಡಗಳು | ಜನಪ್ರತಿನಿಧಿಗಳು ಭಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಪೆಂಡಾಲ್ ಗಣಪತಿಯ 71ನೇ ವರ್ಷದ ವಿಸರ್ಜನಾ ಮಹೋತ್ಸವ ಶನಿವಾರ ಅರ್ಥಪೂರ್ಣವಾಗಿ ನೆರವೇರಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಮೇಯರ್ ಗಿರೀಶ್ ಚನ್ನವೀರಪ್ಪ ಇತರರು ಕರ್ಪೂರ ಹಚ್ಚಿ, ಪುಷ್ಪ ಅರ್ಪಿಸಿ, ಈಡುಗಾಯಿ ಒಡೆಯುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

30ಕ್ಕೂ ಹೆಚ್ಚು ಕಲಾ ತಂಡಗಳು ಭಾಗವಹಿಸಿ ಗಮನ ಸೆಳೆದವು. ಮೆರವಣಿಗೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಈ ವೇಳೆ ಮಾತನಾಡಿದ ಸಂಸದ



ಶ್ರೇಯಸ್ ಪಟೇಲ್, ಕಳೆದ ಏಳು ದಶಕಗಳಿಂದ ಶ್ರೀ ಗಣಪತಿ ಸೇವಾ ಸಮಿತಿ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಣೇಶ ಚತುರ್ಥಿ ಆರಂಭ ದಿನದಿಂದ ವಿಸರ್ಜನೆ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ ಸಮಿತಿ ಮೆಚ್ಚುಗೆಗೆ ಪಾತ್ರವಾಗಿದೆ. ಪರಸ್ಪರ ಸ್ನೇಹ, ಏಕತೆ, ಸಾಮರಸ್ಯ, ಭ್ರಾತೃತ್ವದ ಸಂಕೇತವಾದ ಶ್ರೀ ಗಣೇಶ ಎಲ್ಲರಿಗೂ ಒಳಿತು ಮಾಡಲಿ, ಗಣೇಶನ ಆಶೀರ್ವಾದದಿಂದ ನಾಡಿನಲ್ಲಿ ಶಾಂತಿ, ಸಮೃದ್ಧಿ, ಸಂತೋಷ ಸುಭಿಕ್ಷವಾಗಿರಲಿ ಎಂದು ಪ್ರಾರ್ಥಿಸಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ನಗರದ ಪೆಂಡಾಲ್ ಗಣಪತಿಯ ವಿಸರ್ಜನಾ ಮೆರವಣಿಗೆಯನ್ನು ಹಲವು ಬಹಳ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಗಣಪತಿ ಸೇವಾ ಸಂಸ್ಥೆಯಿಂದ ಪ್ರತಿ ವರ್ಷ ಆಕರ್ಷಕವಾಗಿ ಗಣಪತಿ ಮೆರವಣಿಗೆ ನಗರದ ರಾಜ ಬೀದಿಗಳಲ್ಲಿ ಸಾಗುತ್ತಿದೆ. ಗಣೇಶ ಎಲ್ಲರಿಗೂ ಒಳಿತು ಮಾಡಲಿ ಎಂದರು.

ಮೆರವಣಿಗೆ ಗಣಪತಿ ಪೆಂಡಾಲ್ ನಿಂದ ಶಿವನಂಜಪ್ಪ ವೃತ್ತ, ಗಾಂಧಿ ಬಜಾರ್, ಹಾಸನಾಂಬ ವೃತ್ತ, ಸಂತೆ ಪೇಟೆ, ಹೊಸ ಲೈನ್ ರಸ್ತೆ, ಅರಳೇಪೇಟೆ ರಸ್ತೆ, ಪಾರ್ಕ್ ರಸ್ತೆ, ಸ್ಲೇಟರ್ಸ್ ವೃತ್ತ, ದೊಡ್ಡಿ ರೋಡ್, ಮಹಾವೀರ ವೃತ್ತ, ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಾಗಿತು.

ಮೆರವಣಿಗೆಯಲ್ಲಿ ನಂದಿ ಕುಣಿತ, ಡೊಳ್ಳು ಕುಣಿತ, ವೀರಗಾಸೆ, ಚಮನ ಕುಣಿತ, ಬ್ಯಾಂಡ್ ಸೆಟ್, ಕೀಲು ಕುದುರೆ, ಬೆದರು ಬೊಂಬೆ ಪ್ರದರ್ಶನ, ಹುಲಿ ವೇಷ, ಕುರುಬನ ವೇಷ, ಬೃಹತ್ ಈಶ್ವರ ಮತ್ತು ಮಾರುತಿ ಪ್ರತಿಮೆ, ಉದ್ದನೆಯ ಮನುಷ್ಯ, ಮಹಿಳೆಯರಿಂದ ಡೊಳ್ಳು ಕುಣಿತ, ಕೊಡಗಿನ ನೃತ್ಯ, ಬೆಂಕಿಯಲ್ಲಿ ಸಾಹಸ ಸೇರಿದಂತೆ ವಿವಿಧ ತಂಡಗಳು ಭಾಗವಹಿಸಿ ಗಮನ ಸೆಳೆದವು.

ಸಾರ್ವಜನಿಕರು, ಯುವಕ-ಯುವತಿಯರು ಮೆರವಣಿಗೆ ಉದ್ದಕ್ಕೂ ಕುಣಿದು ಕುಪ್ಪಳಿಸಿದರು, ಪೆಂಡಲ್ ಗಣಪತಿ ಉತ್ಸವದ ಅಂಗವಾಗಿ ನಗರದ 19ನೇ ವಾರ್ಡಿನ ಅರಳೇಪೇಟೆ ನಿವಾಸಿಗಳು, ಅಂಗಡಿ ಮಾಲೀಕರಿಂದ ಅನ್ನದಾನ, ಶ್ರೀ ಬಸವೇಶ್ವರ ಕಲ್ಯಾಣ ಮಂಟಪ ಬಳಿ, ಸಹ್ಯಾದ್ರಿ ವೃತದಲ್ಲಿ ಸೇರಿದಂತೆ ಹಲವಾರು ಕಡೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ರಾತ್ರಿ 9 ಗಂಟೆಗೆ ದೇವಿಗೆರೆಯಲ್ಲಿ ತೆಪ್ಪೋತ್ಸವ ಬಳಿಕ ಸಾವಿರಾರು ಜನರ ಸಮ್ಮುಖದಲ್ಲಿ ಗಣೇಶ ವಿಸರ್ಜನೆ ನೆರವೇರಿತು.

# ನಾಳೆಯಿಂದ ಹಿರೀಸಾವೆಯಲ್ಲಿ ದಸರಾ ಮಹೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಸೆ.22 ರಿಂದ ಅ.2ರ ವರೆಗೆ ಶ್ರೀ ಚೌಡೇಶ್ವರಿ ದೇವಿಯ 14ನೇ ವರ್ಷದ ನವರಾತ್ರಿ ಹಾಗೂ ದಸರಾ ಉತ್ಸವ ಜರುಗಲಿದೆ.

ಸೋಮವಾರ ಬೆಳಿಗ್ಗೆ 10 ಗಂಟೆಗೆ ಉಯ್ಯಾಲೆ ಕಂಬದ ಹತ್ತಿರ ಶ್ರೀ ಚೌಡೇಶ್ವರಿ ದೇವಿಯ ನವರಾತ್ರಿ ಹಾಗೂ ದಸರಾ ಮಹೋತ್ಸವಕ್ಕೆ ಶಾಸಕ ಸಿ.ಎನ್.ಬಾಲಕೃಷ್ಣ ಚಾಲನೆ ನೀಡಲಿದ್ದಾರೆ. ಮಾಜಿ ಎಂಎಲ್ಸಿ ಎಂ.ಎ. ಗೋಪಾಲಸ್ವಾಮಿ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಗಮದ ಅಧ್ಯಕ್ಷ ಹೆಚ್.ಸಿ.ಲಲಿತ್ ರಾಘವ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ ಬೋರಯ್ಯ, ಸೊಸೈಟಿ ಅಧ್ಯಕ್ಷ ಮಹೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಈ.ಬೋರಣ್ಣ ದೀಪ ಬೆಳಗಿಸಲಿದ್ದಾರೆ.

ಸೆ. 23ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಿ.ಹೆಚ್.ಸಿ. ಶ್ರೀಕಂಠಯ್ಯನವರ ಕುಟುಂಬದವರಿಂದ ಚಂಡಿಕಾ ಹೋಮ, ಪೂರ್ಣಾಹುತಿ ಜರುಗಲಿದ್ದು, ಸಂಜೆ 7 ಗಂಟೆಗೆ ಶ್ರೀ ಗದ್ದೆ ಕೆಂಪಮ್ಮ ದೇವಿ ಒಕ್ಕಲು ಮನೆತನದವರಿಂದ ಶ್ರೀ ಚೌಡೇಶ್ವರಿ ದೇವಿಯ ದೀಪೋತ್ಸವ ನೆರವೇರಲಿದೆ.

ಸೆ. 24ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಧರ್ಮದರ್ಶಿ ಶ್ರೀ ಫಣೀಶ್ ಕುಟುಂಬದವರಿಂದ ಹೋಮ,




ಹವನ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ. ಸಂಜೆ 7 ಗಂಟೆಗೆ ಶ್ರೀರಂಗನಾಥ ಸ್ವಾಮಿ ಒಕ್ಕಲು ಮನೆತನದವರಿಂದ ಶ್ರೀ ಚೌಡೇಶ್ವರಿ ದೇವಿಯ ಅಶ್ವ ವಾಹನೋತ್ಸವ ನಡೆಯಲಿದೆ.

ಸೆ. 25ರ ಗುರುವಾರ ಸವಿತಾ ಶಿವನಂಜೇಗೌಡ ಅವರಿಂದ ಹೋಮ ಜರುಗಲಿದ್ದು, ಶ್ರೀ ವಿಶ್ವಕರ್ಮ ಸಮಾಜದವರಿಂದ ಚೌಡೇಶ್ವರಿ ದೇವಿಯ ಸಿಂಹ ವಾಹನೋತ್ಸವ ನೆರವೇರಲಿದೆ.

ಸೆ.26 ಶುಕ್ರವಾರ ಎಸ್ ಬಿ ಐ ನಿವೃತ್ತ ವ್ಯವಸ್ಥಾಪಕ ಕೃಷ್ಣನ್ ಅವರಿಂದ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿದ್ದು ಸಂಜೆ 7 ಗಂಟೆಗೆ ಕಣತೂರು ಶ್ರೀ ಕೆಂಪಮ್ಮ ದೇವಿ ಒಕ್ಕಲು ಮನೆತನದವರಿಂದ ಶ್ರೀ ಚೌಡೇಶ್ವರಿ ದೇವಿಯ ಚಿಕ್ಕ ರಥೋತ್ಸವ ನಡೆಯಲಿದೆ.

ಸೆ.27 ಶನಿವಾರ ಶ್ರೀ ಗಂಗಾಮತಸ್ಥರು ಶ್ರೀ ಚೌಡೇಶ್ವರಿ ದೇವಿಯ ಅಶ್ವ ವಾಹನೋತ್ಸವ ಕೈಗೊಳ್ಳಲಿದ್ದು ಸೆ.28 ಭಾನುವಾರ ಕೂಡಿಹಳ್ಳಿ ಶ್ರೀ ಮಾಯಮ್ಮ ದೇವಿ ಒಕ್ಕಲು ಮನೆತನದಿಂದ ಶ್ರೀ ಚೌಡೇಶ್ವರಿ ದೇವಿಯ ಸಿಂಹ ವಾಹನೋತ್ಸವ ನಡೆಯಲಿದೆ.

ಸೆ. 29ರ ಸೋಮವಾರ ಮೇಲುಕೋಟೆ ಶ್ರೀ ಚೆಲುವರಾಯಸ್ವಾಮಿ ಒಕ್ಕಲುಗಳಿಂದ ಉಯ್ಯಾಲೆ ಉತ್ಸವ ಹಾಗೂ ಸೆ.30 ರ ಮಂಗಳವಾರ ಶ್ರೀ ಕುಂಭೇಶ್ವರ ಸ್ವಾಮಿ ಸೇವಾ ಸಮಿತಿ ವತಿಯಿಂದ ಅಶ್ವ ವಾಹನೋತ್ಸವ ವೈಭವದಿಂದ ಜರುಗಲಿದೆ. ಅ. 1ರ ಬುಧವಾರ ವೀರಶೈವ ಸಮಾಜದ ವತಿಯಿಂದ ದೇವಿಯ ಸಿಂಹ ವಾಹನೋತ್ಸವ ಹಾಗೂ ಸೆ.2 ರಂದು ಗುರುವಾರ ಶ್ರೀ ಚೌಡೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ಚೌಡೇಶ್ವರಿ ದೇವಿ ದಸರಾ ಮಹೋತ್ಸವ ವೈಭವದಿಂದ ಆಚರಣೆಗೊಳ್ಳಲಿದೆ.

ಅ.2 ರ ಬುಧವಾರ ರಾತ್ರಿ 8 ಗಂಟೆಗೆ ಶ್ರೀ ವಿದ್ಯಾ ಗಣಪತಿ ಉತ್ಸವ ನಡೆಯಲಿದೆ.

# ವಿಶೇಷ ಆಹ್ವಾನಿತರಾಗಿ ಹೆಚ್.ಟಿ. ಮೋಹನ್ ಕುಮಾರ್



ಹಾಸನ: ಮಧ್ಯ ಅಮೆರಿಕದ ಹೊಂಡುರಾಸ್‌ನಲ್ಲಿ ಅ. 13 ರಿಂದ 17ರ ವರೆಗೆ ನಡೆಯಲಿರುವ ಅಂತಾರಾಷ್ಟ್ರೀಯ ಕಾಫಿ ಸಂಸ್ಥೆ (ಐಸಿಒ)ಯ ಸಭೆಗೆ ವಿಶೇಷ ಆಹ್ವಾನಿತರಾಗಿ ಕರ್ನಾಟಕ ಬೆಳೆಗಾರರ ಸಂಘದ ವಿಶೇಷ ಪ್ರತಿನಿಧಿಯಾಗಿ ಮಾಜಿ ಅಧ್ಯಕ್ಷ ಡಾ. ಹೆಚ್.ಟಿ. ಮೋಹನ್ ಕುಮಾರ್ ಭಾಗವಹಿಸಲಿದ್ದಾರೆ.

ಸೆ. 26 ರಂದು ಪ್ರಯಾಣ ಬೆಳೆಸಲಿರುವ ಅವರು 7ನೇ ಐಸಿಒ ಹಾಗೂ ಜಾಗತಿಕ ನಾಯಕರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾಫಿ ಉತ್ಪಾದಿಸುವ ರಾಷ್ಟ್ರಗಳ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿ, ಬದಲಾಗುತ್ತಿರುವ ವಿದ್ಯಮಾನಗಳು ಕುರಿತು, ಭವಿಷ್ಯದ ಕಾಫಿ ಮಾರುಕಟ್ಟೆ ವಿಚಾರವಾಗಿ ಚರ್ಚೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಬಿ.ಶಿವಣ್ಣ ಹಾಗೂ ಪ್ರಧಾನ ಕಾರ್ಯದರ್ಶಿ ಟಿ.ಪಿ. ಸುರೇಂದ್ರ ತಿಳಿಸಿದ್ದಾರೆ.

# ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ: ವಸತಿ ರಹಿತರ ಮೇಲೆ ನಿಗಾ

## 4746 ಗಣತಿದಾರರ ನಿಯೋಜನೆ | ನಾಳೆಯಿಂದ ಕಾರ್ಯ ಆರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸೆ. 22 ರಿಂದ ಅ. 7ರ ವರೆಗೆ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ)ಗೆ ಜಿಲ್ಲೆಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು ಅದರಲ್ಲೂ ಸೂರಿಲ್ಲದೆ ಗುಡಿಸಲು, ಟೆಂಟ್‌ಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಸಮೀಕ್ಷೆಯಿಂದ ಹೊರಗುಳಿಯಬಾರದೆಂಬ ಉದ್ದೇಶದಿಂದ ವಿಶೇಷ ಗಮನ ಹರಿಸಲಾಗಿದೆ.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗುಡಿಸಲು ಮತ್ತು ಟೆಂಟ್‌ಗಳ ನಿರ್ಮಿಸಿಕೊಂಡು ಬದುಕು ನಡೆಸುತ್ತಿರುವ ಕುಟುಂಬಗಳನ್ನು ಪಟ್ಟಿ ಮಾಡಿದೆ. ಅರಕಲಗೂಡಿನಲ್ಲಿ 11 ಕುಟುಂಬ, ಅರಸೀಕೆರೆಯಲ್ಲಿ 9 ಪ್ರದೇಶ, ಸಕಲೇಶಪುರದಲ್ಲಿ 931 ಮನೆ, ಬೇಲೂರಿನಲ್ಲಿ 47 ಮನೆ, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1058 ಕುಟುಂಬ, ಹಾಸನದಲ್ಲಿ 831 ಕುಟುಂಬಗಳನ್ನು ಗುರುತಿಸಿದೆ.

**ಒಟ್ಟು 5,47,325 ಕುಟುಂಬ**

ಸಮೀಕ್ಷೆ ಪೂರ್ವ ತಯಾರಿಗಾಗಿ ವಿದ್ಯುತ್ ಇಲಾಖೆ ಸಿಬ್ಬಂದಿಗೆ ವಹಿಸಲಾಗಿದ್ದ ಜಿಯೋ ಟ್ಯಾಗಿಂಗ್ ಕಾರ್ಯ ಪೂರ್ಣಗೊಂಡಿದ್ದು ಜಿಲ್ಲೆಯ 5,47,325ಕ್ಕೂ ಹೆಚ್ಚು ಕುಟುಂಬಗಳ ಸಮೀಕ್ಷೆ ಸೆ. 22ರಿಂದ ಆರಂಭವಾಗಲಿದೆ.

ಜಿಲ್ಲೆಯ ಸೆಸ್ಕಾಂ ಮೀಟರ್ ರೀಡರ್‌ಗಳು ಆ. 23 ರಿಂದ ಆರಂಭಿಸಿದ ಜಿಯೋ ಟ್ಯಾಗಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ. ಸಮೀಕ್ಷೆಯಿಂದ ಯಾರೂ ಹೊರಗುಳಿಯಬಾರದೆಂಬ ಉದ್ದೇಶದಿಂದ ಪ್ರತಿ ಮನೆ ಬಾಗಿಲಿಗೆ ಸಹ ಸ್ಟಿಕ್ಕರ್ ಅಂಟಿಸಲಾಗಿದೆ.

### ತಹಶೀಲ್ದಾರ್ ಕಚೇರಿಯಲ್ಲೂ ಅವಕಾಶ

ಸೆ. 22 ರಿಂದ ಆ. 7ರ ವರೆಗೆ ಸಮೀಕ್ಷೆಗಾಗಿ ಗಣತಿದಾರರು ಮನೆಗಳಿಗೆ ಭೇಟಿ ನೀಡಿದಾಗ ಕುಟುಂಬ ಸದಸ್ಯರು ಇಲ್ಲದೆ ಇದ್ದರೆ ಅಂತವರು ಹತ್ತಿರದ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಮಾಹಿತಿ ಸಲ್ಲಿಸಬಹುದು. ಆಧಾರ್ ಕಾರ್ಡ್ ಹಾಗು ರೇಷನ್ ಕಾರ್ಡ್ ಸಮೀಕ್ಷೆ ವೇಳೆ ಸಲ್ಲಿಸಲು ಸೂಚಿಸಲಾಗಿದೆ.

ಪಟ್ಟಿ ಮಾಡಲಾದ ಮನೆಗಳನ್ನು ಸಮೀಕ್ಷೆ ನಡೆಸಲು 4,746 ಸಮೀಕ್ಷಾದಾರರು ಕರ್ತವ್ಯ ನಿರ್ವಹಿಸಲಿದ್ದಾರೆ. ಅವರನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ 480 ಮೇಲ್ವಿಚಾರಕರನ್ನು ನೇಮಿಸಲಾಗಿದೆ. 150 ಮನೆಗಳ ಗುಂಪಿಗೆ ಒಂದು ಬ್ಲಾಕ್‌ನಂತೆ ಒಟ್ಟು 3,689 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ.

> ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ಎರಡು ಹಂತದಲ್ಲಿ ತರಬೇತಿ ನೀಡಲಾಗಿದೆ. ಸಾರ್ವಜನಿಕರು ಸಿಬ್ಬಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಗಣತಿಗೆ ಸಹಕರಿಸಬೇಕು. ಕೇಳುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕೆಂದು ಮನವಿ ಮಾಡುತ್ತೇವೆ.
>
> **- ಕುಮಾರ್,**
> **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ**

ರಾಜ್ಯದಿಂದ ಆಯ್ಕೆಯಾಗಿರುವ 6 ಮಾಸ್ಟರ್ ತರಬೇತುದಾರರು ಜಿಲ್ಲೆಯ 100 ತರಬೇತುದಾರರಿಗೆ ಅರಿವು ಮೂಡಿಸಲಾಗಿದೆ. ಅಂತಿಮ ಹಂತದ ಕಾರ್ಯಾಗಾರ ಸೆ. 19 ಮತ್ತು 20 ರಂದು ನಡೆಯಲಿದೆ. 50 ಗಣತಿದಾರರಿಗೊಬ್ಬರಂತೆ ಒರ್ವ ಮಾಸ್ಟರ್ ತರಬೇತುದಾರರ ನೇಮಿಸಲಾಗಿದೆ. ಜಿಲ್ಲೆಯ ಆಯಾ ತಾಲ್ಲೂಕು ತಹಶೀಲ್ದಾರ್ ನೇತೃತ್ವದಲ್ಲಿ ಕ್ಲಸ್ಟರ್ ಮಟ್ಟದಲ್ಲಿ ನಿಯೋಜಿಸಲ್ಪಡುವ ಗಣತಿದಾರರಿಗೆ ತರಬೇತಿ ನೀಡಲು ಮೈಕ್ರೋ ಪ್ಲಾನಿಂಗ್ ಮಾಡಿಕೊಳ್ಳಲಾಗಿದ್ದು ಶಾಲಾ ಅವಧಿಯ ಬಳಿಕವಷ್ಟೇ ಗಣತಿದಾರ ಶಿಕ್ಷಕರಿಗೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ.

ಮುಖ್ಯವಾಗಿ ವಿದ್ಯುತ್ ಮೀಟರ್ ಇರುವಂತಹ ಕುಟುಂಬಗಳನ್ನು ಗುರುತಿಸಲಾಗಿದ್ದು ಆರ್‌ಆರ್ ಇಲ್ಲದವರ ಮಾಹಿತಿಯನ್ನು ಆಯಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಿಲ್ ಕಲೆಕ್ಟರ್ ಮತ್ತಿತರ ಸಿಬ್ಬಂದಿ ಮೂಲಕ ಆರ್‌ಆರ್ ರಹಿತ ಕುಟುಂಬಗಳ ಮಾಹಿತಿಯನ್ನು ಕಲೆಹಾಕಿದ್ದಾರೆ. ಆರ್‌ಆರ್ ರಹಿತ ಕುಟುಂಬಗಳನ್ನು ಗ್ರಾಪಂ, ನಾಡ ಕಚೇರಿ ಬಳಿ ಸಮೀಕ್ಷೆಗೊಳಪಡಿಸಲು ಯೋಜಿಸಲಾಗಿದೆ.

# ಸರ್ಕಾರದ ಪ್ರಧಾನ ಯೋಜನೆಗಳ ಕಾರ್ಯಾಗಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿದ್ಯಾರ್ಥಿಗಳು ಮತ್ತು ಯುವಕರಿಗೆ ಅನೇಕ ಯೋಜನೆಗಳು ಲಭ್ಯವಿದ್ದು, ಅವುಗಳ ಕುರಿತು ಮಾಹಿತಿಯನ್ನು ಪಡೆದುಕೊಳ್ಳಲು ಸರ್ಕಾರದ ವೆಬ್‌ಸೈಟ್‌ಗಳಿಗೆ ನಿಯಮಿತವಾಗಿ ಭೇಟಿ ನೀಡಿ ಎಂದು ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಚವರೆ ತಿಳಿಸಿದರು.

ಭಾರತ ಸರ್ಕಾರದ ಮೇರಾ ಯುವ ಭಾರತ್, ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಹೊಯ್ಸಳ ರೋವರ್ಸ್, ಶಾಂತಲಾ ರೇಂಜರ್ಸ್ ಘಟಕ, ಮಧುಶ್ರೀ ಮಹಿಳಾ ಸಮಾಜ ಹಾಗೂ ಸಂಧ್ಯಾರಾಣಿ ಮಹಿಳಾ ಸಮಾಜ ವತಿಯಿಂದ ನಗರದ ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಸರ್ಕಾರದ ಪ್ರಧಾನ ಯೋಜನೆಗಳ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸರ್ಕಾರದ ವೆಬ್‌ಸೈಟ್‌ಗಳಿಗೆ ನಿಯಮಿತವಾಗಿ ಭೇಟಿ ನೀಡುವುದರ ಜೊತೆಗೆ ಅದರ ನವೀಕರಣಗಳನ್ನು ತಿಳಿದುಕೊಳ್ಳಬೇಕು. ಮೈ ಭಾರತ್ ಪೋರ್ಟಲ್ ಕುರಿತು ಮಾಹಿತಿಯನ್ನು ಹಂಚಿಕೊಂಡರು.

ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಮಾತನಾಡಿ, ಯುವಕರಿಗೆ ಲಭ್ಯವಿರುವ ಉದ್ಯೋಗಾವಕಾಶಗಳನ್ನು ವಿವರಿಸಿದರು. ಜೊತೆಗೆ ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ ಮತ್ತು ಮುಖ್ಯಮಂತ್ರಿ ಕೌಶಲ ವಿಕಾಸ ಯೋಜನೆಗಳ ಕುರಿತು ತಿಳಿಸಿದರು.

ಜಿಲ್ಲಾ ಸಂಯೋಜಕ ಡಾ. ಪ್ರಸಾದ್ ಬಾಬು ಮಾತನಾಡಿ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಕುರಿತು ಮಾತನಾಡಿ, ರಾಜ್ಯದಲ್ಲಿ ಹೆಚ್ಚು ಪ್ರಯೋಜನ ಪಡೆಯುತ್ತಿರುವ ಜಿಲ್ಲೆಯಾಗಿ ಅಗ್ರಸ್ಥಾನದಲ್ಲಿದೆ. ಈ ಯೋಜನೆಗೆ ಅಗತ್ಯವಿರುವ ದಾಖಲೆಗಳು, ಅಂಗೀಕೃತ ಆಸ್ಪತ್ರೆಗಳು ಮತ್ತು ಆರೋಗ್ಯ ಮಿತ್ರರ ಪಾತ್ರ ಕುರಿತು ಮಾಹಿತಿ ನೀಡಿದರು.

ಲೀಡ್ ಬ್ಯಾಂಕ್‌ನ ಹಣಕಾಸು ಸಾಕ್ಷರತಾ ಸಲಹೆಗಾರ ಮಲ್ಲೇಶ್ ಮಾತನಾಡಿ, ಡಿಜಿಟಲ್ ಇಂಡಿಯಾ, ವಿಶೇಷವಾಗಿ ಡಿಜಿಟಲ್ ಬ್ಯಾಂಕಿಂಗ್, ಅಟಲ್ ಪಿಂಚಣಿ ಯೋಜನೆ, ರೂಪೇ ಕಾರ್ಡ್, ವಿಮಾ ಯೋಜನೆಗಳು ಕುರಿತು ವಿವರಿಸಿದರು. ಜೊತೆಗೆ ಯುಪಿಐ ವ್ಯವಹಾರಗಳಲ್ಲಿ ಭಾರತವು ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದೆ ಎಂದರು.

ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಪ್ರಾಂಶುಪಾಲ ಡಾ. ಧನಂಜಯ ಮಾತನಾಡಿ, ಯುವಕರ ಭವಿಷ್ಯದ ದೃಷ್ಟಿಯಿಂದ ಇಂತಹ ಸರ್ಕಾರದ ಯೋಜನೆಗಳು ಅತ್ಯಂತ ಉಪಯುಕ್ತವಾಗಿವೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ, ಸಹಾಯಕ ಪ್ರಾಧ್ಯಾಪಕ ಶಿವಮೂರ್ತಿ ಹಾಗೂ ಡಿ. ಪುಟ್ಟರತ್ನಮ್ಮ ಉಪಸ್ಥಿತರಿದ್ದರು.

# ಪ್ರಪಂಚದ ಹೃದಯವೇ ಒಂದು: ಯಾರೂ ಅನ್ಯರಲ್ಲ



**- ಅಂತೋಣಿ ಮುತ್ತು.ವಿ**
**ಶಿಕ್ಷಕರು ಹಾಸನ**

ಮಾನವಕುಲವು ಸಮುದ್ರದ ಅಲೆಗಳಂತೆ ಅನೇಕ ರೂಪಗಳಲ್ಲಿ ವಿಭಜಿತವಾಗಿದ್ದರೂ, ಆಳದಲ್ಲಿ ಒಂದೇ ಹೃದಯದ ಧ್ವನಿ ಹರಿದುಬರುತ್ತದೆ. ಧರ್ಮ, ಭಾಷೆ, ಜಾತಿ, ಬಣ್ಣ, ದೇಶಗಳ ಬೇರ್ಪಾಟು ಕೇವಲ ನಕ್ಷೆಯ ಮೇಲೆ ಬರೆದ ಗಡಿಯ ರೇಖೆಯಂತೆ ತಾತ್ಕಾಲಿಕವಾಗಿಯೇ ಇರುವವು, ಆದರೆ ಜೀವಂತ ಹೃದಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಜೇಮ್ಸ್ ಕರ್ಕಪ್ ಅವರ "No Men Are Foreign" ಕವನವು ಮಾನವೀಯತೆಯ ಅಮರ ಸಂದೇಶವನ್ನು ಅತ್ಯಂತ ಸುಂದರವಾಗಿ ಪ್ರತಿಪಾದಿಸುತ್ತದೆ. ನಾವು ಎಲ್ಲರೂ ಒಂದೇ ಸೂರ್ಯನ ಕೆಳಗೆ ಬೆಳೆಯುತ್ತೇವೆ, ಒಂದೇ ಗಾಳಿಯ ಮಿಡಿತವನ್ನು ಉಸಿರಾಡುತ್ತೇವೆ, ನಮ್ಮ ನೋವು, ನಗು, ಸಂತೋಷ ಮತ್ತು ದುಃಖ ಎಲ್ಲವೂ ಒಂದೇ ನದಿಯ ಹರಿವಿನಂತೆ ಪ್ರತಿಧ್ವನಿಸುತ್ತದೆ ಮತ್ತು ಕೊನೆಗೆ ಎಲ್ಲರೂ ಒಂದೇ ಭೂಮಿಯ ಮಡಿಲಲ್ಲಿ ಲೀನರಾಗುತ್ತೇವೆ. ಈ ತತ್ವವನ್ನು ನಾವು ಇಂದಿನ ಜಗತ್ತಿನ ಘಟನೆಗಳಲ್ಲಿ ಸ್ಪಷ್ಟವಾಗಿ ನೋಡಬಹುದು. ಉದಾಹರಣೆಗೆ, COVID-19 ಮಹಾಮಾರಿಯ ಸಮಯದಲ್ಲಿ ವೈರಸ್ ಯಾವ ದೇಶ, ಧರ್ಮ, ಭಾಷೆ ನೋಡಲಿಲ್ಲ; ವಿಶ್ವದ ಎಲ್ಲ ಜನರು ಒಂದೇ ರೀತಿಯ ಸಂಕಷ್ಟಕ್ಕೆ ಒಳಗಾದರು. ಭಾರತವು ಅನೇಕ ರಾಷ್ಟ್ರಗಳಿಗೆ ಲಸಿಕೆಗಳನ್ನು ಕಳುಹಿಸಿದರೆ, ಅಮೆರಿಕಾ, ಜಪಾನ್, ರಷ್ಯಾ ಮುಂತಾದ ದೇಶಗಳು ಸಹ ಭಾರತಕ್ಕೆ ವೈದ್ಯಕೀಯ ಸಾಧನಗಳನ್ನು ಒದಗಿಸಿದವು. ಈ ಘಟನೆಯಿಂದ, ಮಾನವೀಯತೆ ಗಡಿಗಳನ್ನು ಮೀರಿ ಬದುಕುತ್ತಿರುವುದನ್ನು ಪ್ರತಿಯೊಬ್ಬರೂ ನೋಡುತಕ್ಕದ್ದಾಗಿದೆ. 21ನೇ ಶತಮಾನದಲ್ಲಿಯೂ, ಧರ್ಮ ಮತ್ತು ಭಾಷೆಗಳ ಮಧ್ಯೆ ಸಂಘರ್ಷಗಳು ನಡೆಯುತ್ತಿದ್ದರೂ, ಸಾಮಾಜಿಕ ನ್ಯಾಯ ಮತ್ತು ಸಹೋದರತ್ವಕ್ಕಾಗಿ ಕಾರ್ಯನಿರ್ವಹಿಸಿದ ಸ್ವಾಮಿ ವಿವೇಕಾನಂದರ ಮಾತುಗಳು ನಮ್ಮ ಹೃದಯವನ್ನು ಉತ್ಸಾಹಗೊಳಿಸುತ್ತವೆ: ಟಟನಾನು ಯಾರನ್ನು ಅನ್ಯ ಎಂದು ಭಾವಿಸುತ್ತಿಲ್ಲ; ನಾನು ಎಲ್ಲರಲ್ಲೂ ದೇವತೆಯನ್ನು ಕಾಣುತ್ತೇನೆ.ಟಟ ಈ ನಿಜವಾದ ಮಾನವೀಯ ತತ್ವವು ಇಂದಿನ ವಿದ್ಯಾರ್ಥಿಗಳು, ಯುವಜನತೆ ಮತ್ತು ಹಿರಿಯರು ಪಾಲಿಸಬೇಕಾದ ಪಾಠವಾಗಿದೆ.

ಪ್ರಕೃತಿ ವಿಕೋಪಗಳು ಕೂಡ ಮಾನವೀಯತೆಯನ್ನು ಪ್ರೋತ್ಸಾಹಿಸುತ್ತವೆ. 2023ರಲ್ಲಿ ಟರ್ಕಿ ಮತ್ತು ಸಿರಿಯಾದಲ್ಲಿ ಸಂಭವಿಸಿದ ಭೂಕಂಪ, ಪಾಕಿಸ್ತಾನದ ಪ್ರವಾಹ, ಭಾರತದ ಕೇರಳ ಪ್ರವಾಹ ? ಎಲ್ಲೆಡೆ ಅನೇಕ ರಾಷ್ಟ್ರಗಳ ತ್ವರಿತ ನೆರವು, ಸ್ವಯಂಸೇವಕರು ಮತ್ತು ಸಂಸ್ಥೆಗಳ ಸಹಕಾರವು ಮಾನವೀಯತೆಯ ಜೀವಂತ ಉದಾಹರಣೆಗಳನ್ನು ಸೃಷ್ಟಿಸಿತು. ಈ ಸಂದರ್ಭಗಳಲ್ಲಿ ನಾವು ಕಂಡೆವು, ಗಡಿಗಳು ಕೇವಲ ಕಾಗದದ ಮೇಲೆ ಬರೆದ ರೇಖೆಗಳಷ್ಟೇ; ಹೃದಯದಲ್ಲಿ ಭಾವನೆಗಳು ಎಲ್ಲರಿಗೂ ಒಂದೇ.

ಈ ಕಲಿಕೆಯನ್ನು ಮಕ್ಕಳಿಗೆ, ಯುವಜನತೆಗೆ ಮತ್ತು ಸಮಾಜದ ಎಲ್ಲಾ ವರ್ಗಗಳಿಗೆ ಹಂಚುವುದು ಅಗತ್ಯ. ಕ್ರೀಡಾಂಗಣದಲ್ಲಿ ಕೂಡ ಇದೇ ಭಾವನೆ ಸ್ಪಷ್ಟವಾಗಿ ಕಾಣುತ್ತದೆ. ಒಲಿಂಪಿಕ್ಸ್, ಏಷ್ಯನ್ ಗೇಮ್ಸ್ ಅಥವಾ ವಿಶ್ವಕಪ್ ಸ್ಪರ್ಧೆಗಳು ದೇಶಗಳ ನಡುವೆ ತೀವ್ರ ಸ್ಪರ್ಧೆ ಇರುವ ಸ್ಥಳವಾಗಿದ್ದರೂ, ಅಂತಿಮವಾಗಿ ಅವು ಸ್ನೇಹ, ಶ್ರದ್ಧೆ ಮತ್ತು ಗೌರವದ ಹಬ್ಬವಾಗುತ್ತವೆ. ಸೋತವರನ್ನು ಪ್ರೋತ್ಸಾಹಿಸುವುದು, ಗೆದ್ದವರನ್ನು ಅಭಿನಂದಿಸುವುದು, ತಂಡಗಳ ನಡುವೆ ಸಂಬಂಧವನ್ನು ಸದೃಢಗೊಳಿಸುವುದು ? ಇವು ಮಾನವೀಯತೆಯ ಅಮೋಘ ದೃಶ್ಯಗಳು.

ತಂತ್ರಜ್ಞಾನ ಮತ್ತು ಶಿಕ್ಷಣದ ಕ್ಷೇತ್ರದಲ್ಲಿ ಕೂಡ ಜಗತ್ತಿನ ಜನರು ಒಂದಾಗಿ ಕೆಲಸ ಮಾಡುತ್ತಿದ್ದಾರೆ. ಭಾರತದಿಂದ ಅಮೆರಿಕಾದವರೆಗೆ ವಿದ್ಯಾರ್ಥಿಗಳು ಒಂದೇ ಆನ್‌ಲೈನ್ ಪಾಠಶಾಲೆಯಲ್ಲಿ ಕಲಿಯುತ್ತಿದ್ದಾರೆ. ವಿಜ್ಞಾನಿಗಳು ಬಾಹ್ಯಾಕಾಶ ಸಂಶೋಧನೆ, ರೋಬೋಟಿಕ್ಸ್, ವೈದ್ಯಕೀಯ ಸಂಶೋಧನೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಸಹಕಾರದ ಮೂಲಕ ಮಹತ್ವಪೂರ್ಣ ಕಾರ್ಯಗಳನ್ನು ಸಾಧಿಸುತ್ತಿದ್ದಾರೆ. ಇದು ಟಟಯಾರೂ ಅನ್ಯರಲ್ಲ'' ಎಂಬ ತತ್ವವನ್ನು ಮತ್ತಷ್ಟು ಬಲಪಡಿಸುತ್ತದೆ. ತಂತ್ರಜ್ಞಾನವು ಜನರ ನಡುವೆ ದೂರವನ್ನು ಕಡಿಮೆ ಮಾಡಿದಂತೆ, ಮಾನವೀಯತೆಯ ಅಂತರಂಗವನ್ನು ಹತ್ತಿರ ತರಲು ಸಹಾಯ ಮಾಡುತ್ತಿದೆ.

ಆದರೂ, ಇಂದಿಗೂ ಜಗತ್ತಿನಲ್ಲಿ ಯುದ್ಧದ ಹೊಗೆ, ದ್ವೇಷ ಮತ್ತು ಹಿಂಸಾಚಾರವು ಇರುತ್ತದೆ. ಉಕ್ರೇನ್?ರಷ್ಯಾ ಸಂಘರ್ಷ, ಇಸ್ರೇಲ್?ಪ್ಯಾಲಸ್ತೀನ್ ಹೋರಾಟ, ಬಲಿದಾನವಿಲ್ಲದ ನಾಗರಿಕರ, ಮಕ್ಕಳ, ಮಹಿಳೆಯರ ಪ್ರಾಣ ಹಾನಿ ? ಇವು ಮಾನವತೆಯನ್ನು ಹಾಳುಮಾಡುತ್ತವೆ. ಈ ಸಂದರ್ಭದಲ್ಲಿ ಕವಿಯ ಎಚ್ಚರಿಕೆ ಸತ್ಯವಾಗುತ್ತದೆ: ಇತರರಿಗೆ ಹಾನಿ ಮಾಡಿದಾಗ, ನಾವು ನಮಗೆ ತಾನೇ ಹಾನಿ ಮಾಡುತ್ತೇವೆ.

ಸಾರಾಂಶವಾಗಿ, ಪ್ರಪಂಚದ ಹೃದಯವೇ ಒಂದು: ಯಾರೂ ಅನ್ಯರಲ್ಲಟಟ ಎಂಬುದು ಕೇವಲ ಕಾವ್ಯವಲ್ಲ; ಅದು ಜೀವನದ ಮಾರ್ಗದರ್ಶಕ. ಶಾಂತಿ, ಪ್ರೀತಿ, ಸಹಕಾರವೇ ನಿಜವಾದ ಮಾನವೀಯ ಸಂಪತ್ತು. ನಾವು ಒಂದೇ ಗಾಳಿಯ ಹೊನ್ನನ್ನು ಉಸಿರಾಡುತ್ತೇವೆ, ಒಂದೇ ಭೂಮಿಯ ಹಸಿರುಮಟ್ಟದಲ್ಲಿ ನಡೆಯುತ್ತೇವೆ, ಒಂದೇ ಭವಿಷ್ಯದ ದೀಪವನ್ನು ಹಂಚಿಕೊಳ್ಳುತ್ತೇವೆ. ಹೀಗಾಗಿ, ಯಾರೂ ಅನ್ಯರಲ್ಲ, ಎಲ್ಲರೂ ನಮ್ಮವರೇ ಎಂಬ ಸಂದೇಶವನ್ನು ಪ್ರತಿದಿನದ ಜೀವನದಲ್ಲಿ ಅನುಸರಿಸುವುದು ನಮ್ಮ ಕರ್ತವ್ಯ, ಮತ್ತು ಸ್ವಾಮಿ ವಿವೇಕಾನಂದರ ಪ್ರೇರಣೆಯಂತೆ ಮಾನವೀಯತೆಯನ್ನು ಎಲ್ಲಾ ದೃಷ್ಟಿಕೋಣಗಳಲ್ಲಿ ಒಪ್ಪಿಕೊಳ್ಳುವುದು ನಮ್ಮ ಜೀವನದ ಮಹತ್ವದ ಗುರಿಯಾಗಿರಬೇಕು.

# ಮೆಳಗೋಡು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲೇ ಅತಿ ಹೆಚ್ಚು ಸೈನಿಕರನ್ನು ದೇಶಕ್ಕೆ ನೀಡಿರುವ ತಾಲ್ಲೂಕಿನ ಮೆಳಗೋಡು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ ಹಮ್ಮಿಕೊಂಡಿರುವುದು ಒಳ್ಳೆಯ ಬೆಳವಣಿಗೆಯೆಂದು ನಿವೃತ್ತ ಯೋಧರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಅಧ್ಯಕ್ಷ ಕರಿಗೌಡ ತಿಳಿಸಿದರು.

ತಾಲ್ಲೂಕಿನ ಮೆಳಗೋಡು ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರದಲ್ಲಿ ಮಾತನಾಡಿ, ಗ್ರಾಮದಲ್ಲಿ 60ಕ್ಕೂ ಹೆಚ್ಚು ಯೋಧರು ದೇಶ ಸೇವೆಗೆ ಸೇರಿದ್ದಾರೆ. ಜಿಲ್ಲೆಯಲ್ಲಿ ಮೂರುವರೆ ಸಾವಿರಕ್ಕೂ ಹೆಚ್ಚು ಸೈನಿಕರಿದ್ದು ಒಂದು ಗ್ರಾಮದಲ್ಲೇ 60ಕ್ಕೂ ಹೆಚ್ಚು ಸೈನಿಕರಿರುವುದು ಹೆಮ್ಮೆಯ ವಿಚಾರ. ದೇಶ ಉಳಿಯಬೇಕೆಂದರೆ ಮನೆಗೊಬ್ಬರಂತೆ ದೇಶ ಸೇವೆ ಮಾಡಲು ಮುಂದೆ ಬರಬೇಕು ಎಂದು ಕರೆ ನೀಡಿದ ಅವರು, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಸಹ ತಾವು ಹೋದಲೆಲ್ಲಾ ದೇಶ ಸೇವೆ ಮಾಡಲು ಯುವಕರನ್ನು ಪ್ರೇರೇಪಿಸುವಂತೆ ತಿಳಿಸಿದರು.

ಶಿಬಿರದ ಕಾರ್ಯಕ್ರಮಾಧಿಕಾರಿ ಸುಬ್ರಾಯ ಪ್ರಭು ಮಾತನಾಡಿ, ಸೈನಿಕರ ಗ್ರಾಮವಾದ ಈ ಪುಣ್ಯ ಭೂಮಿಯಲ್ಲಿ ಎನ್‌ಎಸ್‌ಎಸ್ ಶಿಬಿರ ಆಯೋಜನೆ ಮಾಡಿರುವುದು ನಮಗೆ ಹೆಮ್ಮೆಯ ವಿಷಯ. ಶಿಬಿರಾರ್ಥಿಗಳಿಗೆ ಗ್ರಾಮಸ್ಥರು ಉತ್ತಮ ಸಹಕಾರ ನೀಡುತ್ತಿದ್ದಾರೆಂದರು. ಶಿಬಿರಾರ್ಥಿಗಳು, ಮಾಜಿ ಯೋಧರು ಹಾಗೂ ಗ್ರಾಮಸ್ಥರು ಇದ್ದರು.


# ಹಾಸನದಲ್ಲಿ ಇಂದು ಬಸವ ಸಂಸ್ಕೃತಿ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶ್ವಗುರು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕನೆಂದು ರಾಜ್ಯ ಸರ್ಕಾರ ಘೋಷಿಸಿ ಒಂದು ವರ್ಷ ಪೂರೈಸಿದ ಸವಿ ನೆನಪಿಗಾಗಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಬಸವ ಸಂಸ್ಕೃತಿ ಅಭಿಯಾನ ರಥಯಾತ್ರೆ ಸೆ. 21ರ ಭಾನುವಾರ ಹಾಸನಕ್ಕೆ ಆಗಮಿಸಲಿದೆ.

ಹಾಸನದಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಜಿಲ್ಲೆಯ ಕೆಲವು ಮಠಾಧೀಶರು ಸಹಮತ ವ್ಯಕ್ತಪಡಿಸಿದ್ದರೆ ಮತ್ತೆ ಕೆಲವರು ತಮ್ಮದೇಯಾದ ವಾದ ಮಂಡನೆ ಮೂಲಕ ಭಾನುವಾರದ ಕಾರ್ಯಕ್ರಮದಿಂದ ದೂರವುಳಿಯುವ ಸಾಧ್ಯತೆಯಿದೆ. ಚಿಕ್ಕಮಗಳೂರಿನಿಂದ ಬೆಳಿಗ್ಗೆ 10 ಗಂಟೆಗೆ ಹಾಸನದ ತಣ್ಣೀರುಹಳ್ಳ ಮಠಕ್ಕೆ ರಥ ಆಗಮಿಸಲಿದೆ. ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ತಣ್ಣೀರುಹಳ್ಳ ಮಠದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಯಲಿದೆ.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೇರಿ ಇತರರು ಬಸವ ರಥಯಾತ್ರೆಗೆ ಚಾಲನೆ ನೀಡುವರು. ಸಂಜೆ 5 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವೇದಿಕೆ ಕಾರ್ಯಕ್ರಮ, ರಾತ್ರಿ 8 ಗಂಟೆಗೆ ಜಂಗಮದಡಿಗೆ ಎಂಬ ನಾಟಕ ಪ್ರದರ್ಶನ ಕಾಣಲಿದೆ.



ಹಾಸನ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಚೈತ್ರಾ ನಾಯಕರಹಳ್ಳಿ ಅವರಿಗೆ ಶನಿವಾರ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ವಚನ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಬಳಗ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಆತ್ಮೀಯರ ಬಳಗ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-21

**1792:** ಫ್ರಾನ್ಸ್‌ನಲ್ಲಿ ಮೊದಲ ಗಣರಾಜ್ಯ ಸ್ಥಾಪನೆಯಾಯಿತು.

**1937:** ಜೆ.ಆರ್.ಆರ್. ಟಾಲ್ಕೀನ್ ಅವರ ಪ್ರಸಿದ್ಧ ಕೃತಿ 'ದಿ ಹಾಬಿಟ್' ಪ್ರಕಟವಾಯಿತು.

**1964:** ಮಾಲ್ಟಾ ದೇಶ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ಸ್ವತಂತ್ರ ರಾಷ್ಟ್ರವಾಯಿತು.

**1981:** ಬೆಲೀಸ್ ದೇಶ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

**2001:** ಯುಎನ್ ಘೋಷಣೆ ಪ್ರಕಾರ ಪ್ರತಿ ವರ್ಷದ 'ಅಂತಾರಾಷ್ಟ್ರೀಯ ಶಾಂತಿ ದಿನ' ಆಚರಿಸಲಾಗುತ್ತಿದೆ.

### ಜನನ

**1866:** ಹೆಚ್.ಜಿ. ವೆಲ್ಸ್, ಇಂಗ್ಲಿಷ್ ವಿಜ್ಞಾನ ಕಲ್ಪಿತ ಸಾಹಿತ್ಯದ ಪ್ರಸಿದ್ಧ ಲೇಖಕ

**1874:** ಗೂಸ್ತಾವ್ ಹೋಲ್ಸ್ಟ್, ಇಂಗ್ಲೀಷ್ ಸಂಗೀತ ಸಂಯೋಜಕ

**1912:** ಚಕ್ ಜೋನ್ಸ್, ಅಮೇರಿಕನ್ ಕಾರ್ಟೂನ್ ರಚನಕಾರ

**1947:** ಸ್ಟೀಫನ್ ಕಿಂಗ್, ಭಯಾನಕ ಕಾದಂಬರಿಗಳ ಪ್ರಸಿದ್ಧ ಅಮೇರಿಕನ್ ಲೇಖಕ

### ಮರಣ

**1832:** ಸರ್ ವಾಲ್ಟರ್ ಸ್ಕಾಟ್, ಸ್ಕಾಟ್ಲ್ಯಾಂಡ್‌ನ ಖ್ಯಾತ ಕವಿ ಮತ್ತು ಕಾದಂಬರಿಕಾರ

**1860:** ಆರ್ಥರ್ ಶೋಪೆನ್ಹೋವರ್, ಜರ್ಮನ್ ದಾರ್ಶನಿಕ

**1937:** ಜೆ.ಆರ್.ಆರ್. ಟಾಲ್ಕೀನ್ ಅವರ ಆಪ್ತ, ಲೇಖಕ ಮತ್ತು ಅಕಾಡೆಮಿಕ್ ಜಾರ್ಜ್ ಆಂಡ್ರ್ಯೂ ಬೊನ್ನನ್

**1998:** ಫ್ಲಾರೆನ್ಸ್ ಗ್ರಿಫಿತ್-ಜಾಯ್ನರ್, ಅಮೇರಿಕನ್ ಅಥ್ಲೀಟ್, ಒಲಿಂಪಿಕ್ ಚಿನ್ನದ ಪದಕ ವಿಜೇತೆ

# ವಿಶ್ವ ಶಾಂತಿ ದಿನ-ಮಾನವತೆಯ ಶಾಶ್ವತ ಹಾದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಪ್ರತಿ ವರ್ಷ ಸೆಪ್ಟೆಂಬರ್ 21ರಂದು ವಿಶ್ವದಾದ್ಯಂತ ಅಂತಾರಾಷ್ಟ್ರೀಯ ಶಾಂತಿ ದಿನವನ್ನು ಆಚರಿಸಲಾಗುತ್ತದೆ. 1981ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಶಾಂತಿ ಮತ್ತು ಅಹಿಂಸೆಯ ಸಂಕೇತವಾಗಿ ಈ ದಿನವನ್ನು ಘೋಷಿಸಿತು. 2001ರಿಂದ ಪ್ರತಿ ವರ್ಷ ಇದೇ ದಿನಕ್ಕೆ ಶಾಶ್ವತವಾಗಿ ನಿಗದಿಪಡಿಸಿ, ಜಗತ್ತಿನ ಎಲ್ಲೆಡೆ ಶಾಂತಿಯ ಸಂದೇಶ ಸಾರಲಾಗುತ್ತಿದೆ.

ಶಾಂತಿಯ ಅರ್ಥ:

ಶಾಂತಿ ಎಂದರೆ ಕೇವಲ ಯುದ್ಧವಿಲ್ಲದ ಪರಿಸ್ಥಿತಿ ಮಾತ್ರವಲ್ಲ. ಅದು ಭಯವಿಲ್ಲದ ಬದುಕು, ಸಮಾನತೆಯ ಸಮಾಜ, ಸಹಜೀವನದ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳ ಪ್ರತೀಕ. ನಿಜವಾದ ಶಾಂತಿ ಅಂದರೆ ಅಂತರಂಗದ ನೆಮ್ಮದಿ, ಸಮಾಜದಲ್ಲಿ ಸಮರಸತೆ ಮತ್ತು ರಾಷ್ಟ್ರಗಳಲ್ಲಿ ಸಹಕಾರ.

ಪ್ರಸ್ತುತ ಜಗತ್ತಿನ ಸವಾಲುಗಳು:

ಇಂದಿನ ಯುಗದಲ್ಲಿ ಶಾಂತಿಯ ಅಡಚಣೆಗಳಿಗೆ ಕಾರಣವಾಗಿರುವ ಅಂಶಗಳು ಅನೇಕ:

- ಯುದ್ಧ ಹಾಗೂ ಭಯೋತ್ಪಾದನೆ
- ಜಾತಿ, ಧರ್ಮ, ಭಾಷೆಯ ಆಧಾರದ ಅಸಹಿಷ್ಣುತೆ
- ದಾರಿದ್ರ್ಯ, ಹಸಿವು ಮತ್ತು ಅಸಮಾನತೆ
- ಪರಿಸರ ಹಾನಿ ಮತ್ತು ಹವಾಮಾನ ಬದಲಾವಣೆ
- ತಂತ್ರಜ್ಞಾನವನ್ನು ದುರುಪಯೋಗ

ಈ ಎಲ್ಲಾ ಸವಾಲುಗಳ ನಡುವೆ ಶಾಂತಿ ಕೇವಲ ಒಂದು ಕನಸಾಗಿ ಉಳಿಯಬಾರದು. ಅದನ್ನು ಜಾಗೃತಿಯಿಂದ ಬೆಳೆಸಿಕೊಳ್ಳುವುದು ಕಾಲದ ಅವಶ್ಯಕತೆ.

1. ಅಹಿಂಸಾ ತತ್ವ ಮಹಾತ್ಮ ಗಾಂಧೀಜಿ ತೋರಿಸಿದಂತೆ ಅಹಿಂಸೆಯೇ ಶಾಂತಿಯ ಆಧಾರ.
2. ಸಂವಾದ ಮತ್ತು ರಾಜತಾಂತ್ರಿಕತೆ ವಿವಾದಗಳಿಗೆ ಯುದ್ಧವಲ್ಲ, ಮಾತುಕತೆಯೇ ಪರಿಹಾರ.



3. ಶಿಕ್ಷಣ ಮತ್ತು ಜಾಗೃತಿ ಶಾಂತಿ ಮೌಲ್ಯಗಳನ್ನು ಶಾಲೆಯ ಹಂತದಿಂದಲೇ ಬಿತ್ತುವುದು.
4. ಆರ್ಥಿಕ ಸಮಾನತೆ ಎಲ್ಲರಿಗೂ ಅಲ್ಪಮಟ್ಟದಾದರೂ ಸಮಾನ ಅವಕಾಶ ಒದಗಿಸಿದಾಗ ದ್ವೇಷ ಕಡಿಮೆಯಾಗುತ್ತದೆ.
5. ಯುವಕರ ಪಾಲ್ಗೊಳ್ಳಿಕೆ ಭಾವಿ ಸಮಾಜವನ್ನು ರೂಪಿಸುವ ಯುವಕರು ಶಾಂತಿಯ ಪ್ರಮುಖ ರಾಯಭಾರಿಗಳು.

### ಭಾರತದ ಕೊಡುಗೆ

ಭಾರತ ಶಾಂತಿಯ ಸಂದೇಶವನ್ನು ಅನಾದಿಕಾಲದಿಂದಲೇ ಸಾರುತ್ತಿದೆ. ಬುದ್ಧನ ಉಪದೇಶಗಳು, ಅಶೋಕನ ಧರ್ಮಚಕ್ರ, ಗಾಂಧೀಜಿಯ ಅಹಿಂಸಾ ತತ್ವ ಇವೆಲ್ಲವು ಜಗತ್ತಿಗೆ ಶಾಂತಿಯ ದಾರಿ ತೋರಿಸಿದವು. ಟವಸುದೈವ ಕುಟುಬಕಂಟ ಎಂಬ ಭಾರತೀಯ ತತ್ವ ಇಂದಿಗೂ ವಿಶ್ವಕ್ಕೆ ಶಾಶ್ವತ ಸಂದೇಶ.

ಶಾಂತಿ ಎಂದರೆ ಕೇವಲ ಸರ್ಕಾರಗಳ ನೀತಿ ಅಲ್ಲ, ಅದು ಪ್ರತಿಯೊಬ್ಬರ ಮನಸ್ಸಿನಿಂದ ಪ್ರಾರಂಭವಾಗುವ ಜೀವನಶೈಲಿ. ಶಾಂತಿ ಇಲ್ಲದೆ ಪ್ರಗತಿ ಸಾಧ್ಯವಿಲ್ಲ, ಪ್ರಗತಿ ಇಲ್ಲದೆ ಶಾಶ್ವತ ಶಾಂತಿ ಸಾಧ್ಯವಿಲ್ಲ. ಪ್ರತಿಯೊಬ್ಬನಿಂದಲೂ ಒಂದು ದೀಪ ಬೆಳಗಿದರೆ, ಜಗತ್ತೆಲ್ಲಾ ಬೆಳಗುತ್ತದೆ ಎಂಬಂತೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಶಾಂತಿಯ ದಾರಿಯನ್ನು ಹಿಡಿದಾಗಲೇ ನಿಜವಾದ ವಿಶ್ವ ಶಾಂತಿ ಸಾಧ್ಯ.

### ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯ

ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಯುನೈಟೆಡ್ ಕಿಂಗ್‌ಡಮ್ ಮತ್ತು ಕೋಸ್ಟರಿಕಾ ಪ್ರಾಯೋಜಿಸಿದ ನಿರ್ಣಯದಲ್ಲಿ 4 ಅಂತಾರಾಷ್ಟ್ರೀಯ ಶಾಂತಿ ದಿನವನ್ನು ಶಾಂತಿಯ ಆದರ್ಶಗಳನ್ನು ಸ್ಮರಿಸಲು ಮತ್ತು ಬಲಪಡಿಸಲು ಮೀಸಲಿಡುವುದಾಗಿ ಘೋಷಿಸಿತು. ಆರಂಭದಲ್ಲಿ ಆಯ್ಕೆ ಮಾಡಿದ ದಿನಾಂಕವು ಸೆಪ್ಟೆಂಬರ್‌ನ ಮೂರನೇ ಮಂಗಳವಾರದ ಸಾಮಾನ್ಯ ಸಭೆಯ ವಾರ್ಷಿಕ ಅಧಿವೇಶನಗಳ ನಿಯಮಿತ ಉದ್ಘಾಟನಾ ದಿನವಾಗಿತ್ತು. ಇದನ್ನು 2001ರಲ್ಲಿ ಪ್ರತಿವರ್ಷ ಸೆಪ್ಟೆಂಬರ್ 21 ರಂದು ಪ್ರಸ್ತುತ ವಾರ್ಷಿಕ ಆಚರಣೆಗೆ ಬದಲಾಯಿಸಲಾಯಿತು.

### 1983ರ ವಾರ್ಷಿಕ ವರದಿಗಳು

1983 ರಿಂದ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕಚೇರಿಯ ಕೋರಿಕೆಯ ಮೇರೆಗೆ, ಪಾತ್‌ವೇಸ್ ಟು ಪೀಸ್ (ಪಿಟಿಪಿ) ಶಾಂತಿ ದಿನದ ಚಟುವಟಿಕೆಗಳನ್ನು ಸಂಕ್ಷೇಪಿಸಿ ನಾವು ಜನರು ಉಪಕ್ರಮದ ವಾರ್ಷಿಕ ವರದಿಯನ್ನು ಯುಎನ್‌ಗೆ ಸಲ್ಲಿಸಿತು. 1987 ರಲ್ಲಿ ಅಂತಾರಾಷ್ಟ್ರೀಯ ಶಾಂತಿ ವರ್ಷಕ್ಕಾಗಿ ಅದರ ಉಪಕ್ರಮಗಳಿಗಾಗಿ, ಪಿಟಿಪಿಗೆ ಯುಎನ್ ಪ್ರಧಾನ ಕಾರ್ಯದರ್ಶಿ ಪೆರೆಜ್ ಡಿ ಕ್ಯುಲ್ಲರ್ ಅವರು ಶಾಂತಿ ಸಂದೇಶವಾಹಕ ಸ್ಥಾನಮಾನವನ್ನು ನೀಡಿದರು. 8 2006 ರಲ್ಲಿ ನಾವು ಜನರು ಉಪಕ್ರಮದ ಹೆಸರನ್ನು ಶಾಂತಿ ಉಪಕ್ರಮ ಸಂಸ್ಕೃತಿ ಎಂದು ಬದಲಾಯಿಸಲಾಯಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248